**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್.ಸಿ, ಹರಿಹರ**
**<u>ಸಿ. ಸಿ. 27/2016</u>**

**ಪಿ. ಡಬ್ಲೂ. 37**
**ಸಿ. ಡಬ್ಲೂ. 41**

**ಹೆಸರುಃ ಹಾಲಪ್ಪ.**

**ತಂದೆಃ ಭರಮಪ್ಪ ಪಾಳೇದ.**

**ವಯಸ್ಸುಃ 59 ವರ್ಷ.**

**ಕೆಲಸಃ ವ್ಯವಸಾಯ.**

**ವಾಸಃ ತಿಮ್ಮೇನಹಳ್ಳಿ.**

**<u>ಇಂದು ದಿನಾಂಕ 28-01-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸ. ಸ. ಅ ರವರಿಂದಃ</u>**

ಆರೋಪಿ ನನಗೆ ಪರಿಚಯ. ಆರೋಪಿ ಭತ್ತವನ್ನು ತೆಗೆದುಕೊಳ್ಳುವುದು ಕೊಡುವುದು ಮಾಡುತ್ತಿದ್ದ ಹಾಗಾಗಿ ಪರಿಚಯ. 2010 ರಲ್ಲಿ ತಿಮ್ಮೇನಹಳ್ಳಿಯಲ್ಲಿರುವ ನಮ್ಮ ಜಮೀನುನಲ್ಲಿ ಭತ್ತ ಬೆಳೆದಿದ್ದೆ. 143 ಚೀಲ 118 ಕ್ವಿಂಟಲ್ ಇತ್ತು 1,000/-ರೂಗಳಿಗೆ 1 ಕ್ವಿಂಟಲ್ ನಂತೆ ಮಾರಾಟ ಮಾಡಿರುತ್ತೇನೆ. ನನಗೆ ಆರೋಪಿ 30,000/-ರೂಗಳನ್ನು ಕೊಟ್ಟಿದ್ದ ಇನ್ನು 85,000/-ರೂಗಳನ್ನು ನನಗೆ ಕೊಡಬೇಕಾಗಿತ್ತು ಅವುಗಳನ್ನು ಒಂದು ತಿಂಗಳುಗಳಲ್ಲಿ ಕೊಡುತ್ತೇನೆ ಎಂದು ಹೇಳಿದ್ದ. ಆದರೆ ಆರೋಪಿ ಒಂದು ತಿಂಗಳಲ್ಲಿ ಹಣವನ್ನು ಕೊಡಲಿಲ್ಲ. ನಾವು ಒಟ್ಟಿಗೆ ಹೋಗಿ ಕೇಳಿರುತ್ತೇವೆ ಕೊಡುತ್ತೇನೆ ಕೊಡುತ್ತೇನೆ ಎಂದು ಹೇಳಿರುತ್ತಾನೆ. ಆರೋಪಿ ಹಣ ಕೊಡದೇ ಇದ್ದ ಕಾರಣ ನಾನು ಮತ್ತು ಉಳಿದವರು ಸೇರಿಕೊಂಡು ಹೋಗಿ ಪಿರ್ಯಾದಿಯನ್ನು ಕೊಟ್ಟಿರುತ್ತೇವೆ. ನನ್ನ ಜಮೀನು ಸರ್ವೆ ನಂಬರ್ 7/3 ರ ಪಹಣಿ ಮತ್ತು ರಸೀದಿಯನ್ನು ಕೊಟ್ಟಿರುತ್ತೇನೆ. ಸಾಕ್ಷಿ ಸದರಿ ಪಹಣಿ ಮತ್ತು ರಸೀದಿಯನ್ನು ನೋಡಿ ಗುರುತಿಸಿದ್ದು ನಿಪಿ 18 ಮತ್ತು 19 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಆರ್. ಪಿ ವಕೀಲರಿಂದಃ**

ಕ್ವಿಂಟಲ್ ಒಂದಕ್ಕೆ 1,000/-ರೂ ನಂತೆ ಮಾತನಾಡಿ ----------------ಕೊಡುವುದಾಗಿ ತಿಳಿಸಿದ್ದು ಎಂದು ಓದಿ ಹೇಳಲಾದ ಹೇಳಿಕೆಯ ಭಾಗವನ್ನು ಸಾಕ್ಷಿ ಸುಳ್ಳು ಎಂದು ಅಲ್ಲೆಗಳೆದ ಕಾರಣ ಸದರಿ ಹೇಳಿಕೆಯ ಭಾವನ್ನು ನಿಡಿ 11 ಎಂದು ಗುರುತಿಸಲಾಯಿತು. 1 ಎಕರೆಗೆ 50 ಚೀಲ ಭತ್ತವನ್ನು ಬೆಳೆಯಬಹುದು. ನನ್ನ

ಭತ್ತವನ್ನು ಆರೋಪಿಗೆ ಕೊಟ್ಟ ಕುರಿತು ಪರಿಚೇಜ್ ಬಿಲ್ ನ್ನು ಪೋಲೀಸರಿಗೆ ಕೊಟ್ಟಿಲ್ಲ. ರೈತರು ಬೆಳೆದಂತಹ ಬೆಳೆಯನ್ನು ಎ. ಪಿ. ಎಂ. ಸಿ ಗೆ ಮಾರಾಟ ಮಾಡಬೇಕೆನ್ನುವುದು ನಿಜ. ರೈತರು ಬೆಳೆದಂತಹ ಬೆಳೆಯನ್ನು ಮಾರಾಟ ಮಾಡಿದಾಗ ಖರೀದಿ ಮಾಡಿದವರು ಖರೀದಿ ಮಾಡಿದ ಬಿಲ್ ನ್ನು ಕೊಡಬೇಕು ಎಂದರೆ ಸಾಕ್ಷಿ ಕೊಡಬೇಕು ಆದರೆ ಅವರು ಕೊಟ್ಟಿಲ್ಲ ಎಂದು ಹೇಳುತ್ತಾರೆ. ಖರೀದಿ ಬಿಲ್ ನ್ನು ಕೊಡದೇ ಇದ್ದಂತಹ ಸಂಧರ್ಭದಲ್ಲಿ ರೈತರು ಎ. ಪಿ. ಎಂ. ಸಿ ಗೆ ಪಿರ್ಯಾದಿಯನ್ನು ಕೊಡಬೇಕು ನಿಜ. ಭತ್ತ ಖರೀದಿ ಮಾಡಿದ ಬಿಲ್ ನ್ನು ಕೊಟ್ಟಿಲ್ಲ ಎಂದು ಎ. ಪಿ. ಎಂ. ಸಿ ಗೆ ನಾನು ಪಿರ್ಯಾದಿಯನ್ನು ಕೊಟ್ಟಿಲ್ಲ. ಯಾವಾಗ ಯಾವ ಪೋಲೀಸರ ಮುಂದೆ ಯಾವ ದಿನಾಂಕದೊಂದು ಪಿರ್ಯಾದಿಯನ್ನು ಕೊಟ್ಟಿರುತ್ತೇನೆ ಎಂದು ಹೇಳಲು ಆಗುವುದಿಲ್ಲ. ಪೋಲೀಸರಿಗೆ ಹೋಗಿ ಕೇಳಿರುತ್ತೇನೆ ಅವರು ಸಮನ್ಸ್ ಬಂದ ನಂತರ ನ್ಯಾಯಾಲಯಕ್ಕೆ ಬರಬೇಕೆಂದು ಹೇಳಿರುತ್ತಾರೆ. ಪಿರ್ಯಾದಿ ಕಾಫಿಯನ್ನು ಪೋಲೀಸರು ನ್ಯಾಯಾಲಯಕ್ಕೆ ಕಳುಹಿಸುತ್ತೇನೆ ಎಂದು ಹೇಳಿದ್ದರಿಂದ ನಾನು ಅದನ್ನು ನೋಡಿರುವುದಿಲ್ಲ. ಎಕರೆಗೆ 40 ರಿಂದ 42 ಚೀಲಮಾತ್ರ ಭತ್ತ ಬೆಳೆಯಲು ಸಾಧ್ಯವಿದ್ದು 2010 ರಲ್ಲಿ ನಮ್ಮ ಜಮೀನನಲ್ಲಿ 143 ಚೀಲ ಭತ್ತ ಆರೋಪಿಗೆ ಮಾರಾಟ ಮಾಡಲು ಕೊಟ್ಟಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಬೆಳೆದಂತಹ ಭತ್ತವನ್ನು ಶ್ರೀನಿವಾಸ ರೈಸ್ ಮಿಲ್ ನಲ್ಲಿ ಅನ್ ಲೋಡ್ ಮಾಡಿರುತ್ತದೆ ಎಂದರೆ ನಿಜ. ಸದರಿ ರೈಸ್ ಮಿಲ್ ನಾಗೇಶ್ವರ ರಾವ್ ಸೇರಿದ್ದು ಎನ್ನುವುದು ಗೊತ್ತಿರುವುದಿಲ್ಲ. ನಾವು ಶ್ರೀನಿವಾಸ್ ರೈಸ್ ಮಿಲ್ ಗೆ ಭತ್ತವನ್ನು ಮಾರಾಟ ಮಾಡಿದ್ದು ಆರೋಪಿಗೆ ಮಾರಾಟ ಮಾಡಿದ್ದೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ 40, 42 ಆತ್ಮೀಯರು ಎಂದರೆ ಸರಿ. ನಾನು ಉಳಿದ ಸಾಕ್ಷಿದಾರರ ಮಾತನ್ನು ಹಾಗೂ ರೈತ ಸಂಘದವರ ಮಾತನ್ನು ಕೇಳಿಕೊಂಡು ಆರೋಪಿ ವಿರುದ್ದ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ಭತ್ತವನ್ನು ಮಾರಾಟ ಮಾಡಿಲ್ಲ ಮತ್ತು ಆರೋಪಿಯಿಂದ ನನಗೆ ಯಾವುದೇ ಹಣ ಬರುವುದು ಬಾಕಿ ಇಲ್ಲ ಎಂದರೆ ಸರಿಯಲ್ಲ. ನಿಪಿ 19 ನ್ನು ನನ್ನ ಅನುಕೂಲಕ್ಕೆ ತಕ್ಕಂತೆ ಸೃಷ್ಟಿಸಿಕೊಂಡು ಪೋಲೀಸರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 19 ಕ್ಕೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ  ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

**ಸಹಿ/-**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**